ಅವರಿಬ್ಬರ ಮದುವೆ ನಿಶ್ಚಿತವಾದ ದಿನದಿಂದಲೂ ಅವನ ಭಾವೀ ಪತ್ನಿ ಲೀನಾ ಹೀಗೆ ಹೇಳುತ್ತಾ ಇದ್ದದ್ದು ಬರ್ತೊಲಿನ್ ಕಿವಿಗೆ ಬೀಳುತ್ತಿತ್ತು – "ನಿಮಗೆ ಗೊತ್ತೇನು ನನ್ನ ನಿಜವಾದ ಹೆಸರು ಲೀನಾ ಅಲ್ಲ. ನನ್ನ ಹೆಸರು ಕರೋಲೀನಾ. ಆದರೆ ಅವರು ನನ್ನನ್ನು ಲೀನಾ ಅಂತ ಕರೀತಾ ಇದ್ದರು. ಅದರಿಂದಲೇ ನನ್ನ ಹೆಸರು ಲೀನಾ ಅಂತಲೇ ಉಳಿದುಕೊಂಡು ಬಿಡ್ತು. ಓಹ್! ಅವರು ತುಂಬ ಒಳ್ಳೆ ಮನುಷ್ಯರು. "ಅಲ್ಲಿ ನೋಡಿ ಅವರ ಚಿತ್ರ" ಎಂದು ಹೇಳಿ ಒಂದು ದೊಡ್ಡ ಫೋಟೋಗ್ರಾಫ್ ಕಡೆ ಬೊಟ್ಟುಮಾಡಿ ತೋರಿಸಿದಳು. ಅವನ ಭಾವೀ ಪತ್ನಿಯ ಮೊದಲ ಗಂಡ ಸಿನೋರ್ ಕೊಸಿಮೊ ಅವನತ್ತ ಮೃದು ಮುಗುಳ್ನಗೆ ಬೀರುತ್ತ ಹ್ಯಾಟ್ ತೆಗೆಯುತ್ತಿರುವುದು ಬರ್ತಲಿನೊ ಕಣ್ಣಿಗೆ ಬಿತ್ತು.

ತನಗೇ ಗೊತ್ತಿಲ್ಲದ ಹಾಗೆ ಬರ್ತಲಿನೊ ಗತಿಸಿದ ಸಜ್ಜನನ ನಮಸ್ಕಾರಕ್ಕೆ ಪ್ರತ್ಯುತ್ತರವಾಗಿ ತನ್ನ ತಲೆಯನ್ನು ಹೆಚ್ಚುಕಡಿಮೆ ಅರ್ಧ ಬಾಗಿಸಿದ್ದ. ತಾದ್ದೇಯಿ ಒಬ್ಬ ಹೆಸರಾಂತ ಶಿಲ್ಪಿ. ಅವರ ನಿಧನದ ನಂತರ ಗೋಡೆಗೆ ತಗುಲಿಹಾಕಿದ್ದ ಅವರ ಭಾವಚಿತ್ರವನ್ನು ತೆಗೆದುಹಾಕಬೇಕೆಂಬ ಆಲೋಚನೆ ಅವನ ವಿಧವೆ ಹೆಂಡತಿ ಲೀನಾಳ ಮನಸ್ಸಿನಲ್ಲಿ ಒಮ್ಮೆಯೂ ಮೂಡಲಿಲ್ಲ. ಅಂಥ ಆಲೋಚನೆ ಏಕಾದರೂ ಬಂದೀತು? ಅವರ ವಿಷಯಕ್ಕೆ ಲೀನಾಳಿಗೆ ಇದ್ದ ಕೃತಜ್ಞತೆಯೇನೂ ಕಮ್ಮಿ ಅಲ್ಲ. ಅವಳ ಮಾನ ಮರ್ಯಾದೆ, ಮನೆ ಬಾಗಿಲು ಆ ಮನೆಯಲ್ಲಿನ ಎಲ್ಲ ಬೆಲೆಬಾಳುವ ಸಮಸ್ತ ವಸ್ತುಗಳೂ ಅವರದ್ದೇ ತಾನೆ?

ಭಾವೀ ಗಂಡ ಸಿಟ್ಟಾದುದರ ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಳ್ಳದೆ ಲೀನಾ ಮಾತು ಮುಂದುವರೆಸಿ, "ನಿಜ ಹೇಳಬೇಕು ಅಂದರೆ ಹೆಸರು ಬದಲಾಯಿಸಿಕೊಳ್ಳುವುದಕ್ಕೆ ನನಗೇನೂ ಇಷ್ಟವಿರಲಿಲ್ಲ, ಆದರೆ ಅವರು ಹೇಳಿದ್ದಕ್ಕೆ ನಾನು 'ಇಲ್ಲ' ಅಂತ ಹೇಳಕ್ಕಾಗ್ತಿರಲಿಲ್ಲ. ನೀವು ನನ್ನನ್ನು ಕೂಡ ಅದೇ ಹೆಸರಿಂದಲೇ ಕರೀಬೇಕು, ಗೊತ್ತಾಯಿತು ತಾನೆ? ತಪ್ಪು ತಿಳಿದುಕೊಳ್ಳುವುದಿಲ್ಲ ತಾನೆ?"

ಬರ್ತೊಲಿನ್ ತಡಬಡಾಯಿಸಿಕೊಂಡು ಹೇಳಿದ – "ಇಲ್ಲ, ಇಲ್ಲ... ಅವರದ್ದು ಸರೀನೇ." ಗೋಡೆಗೆ ನೇತುಹಾಕಿದ್ದ ದೊಡ್ಡ ಭಾವಚಿತ್ರದ ಮೇಲಿನಿಂದ ತನ್ನ ದೃಷ್ಟಿಯನ್ನು ಅತ್ತ ಸರಿಸದಾದ. ಆ ಸಜ್ಜನ ಮನುಷ್ಯ ಅವನತ್ತಲೇ ನೋಡುತ್ತ ಮುಗುಳ್ನಕ್ಕು ಹ್ಯಾಟ್ ತೆಗೆದು ನಮಸ್ಕರಿಸುತ್ತಿದ್ದರು.

ಮೂರು ತಿಂಗಳ ನಂತರ ನೆಂಟರು ಇಷ್ಟರು ಮತ್ತಿತರ ಮಿತ್ರರೆಲ್ಲರೂ ಲೀನಾ ಮತ್ತು ಅವಳ ಗಂಡನನ್ನು ಹನಿಮೂನ್ ಪ್ರವಾಸಕ್ಕೆ ಕಳಿಸಿಕೊಡಲು ಸ್ಟೇಷನ್ನಿಗೆ ಬಂದಿದ್ದರು. ಆಗ ಲೀನಾಳ ಪ್ರಿಯ ಗೆಳತಿ ಅರ್ತೆನ್ಸಿಯಾ ಮೊತ್ತ ತನ್ನ ಗಂಡನ ಕಡೆ ನೋಡುತ್ತ ಒಂದು ದೀರ್ಘ ನಿಟ್ಟುಸಿರೆಳೆದುಕೊಳ್ಳುತ್ತ ಹೇಳಿದಳು – "ಬಡಪಾಯಿ ಬರ್ತಲಿನೊ ಲೀನಾಳಂಥ ಹುಡುಗಿಯ ಜೊತೆ..."

"...ಏಕೆ, ಬಡಪಾಯಿ ಹೇಗೆ?" ಅವಳ ಗಂಡ ಕೇಳಿದರು.

ಈ ಮಹಾಶಯರಿಗೆ ಸಾಕಷ್ಟು ವಯಸ್ಸಾಗಿಬಿಟ್ಟಿದೆ. ಲೀನಾಳ ಎರಡನೇ ಮದುವೆಯ ವಿಷಯದ ಪ್ರಸ್ತಾಪ ಅವರೇ ಮಾಡಿದ್ದು. ಅದರಿಂದಲೇ ಈ ಮದುವೆ ಕುರಿತು ಯಾರು ಏನೇ ಟೀಕೆಮಾಡಿದರೂ ಅವರಿಗೆ ಕೂಡಲೇ ಸಿಟ್ಟು ಬಂದುಬಿಡುತ್ತಿತ್ತು.

"ಬಡಪಾಯಿ ಅಂತ ಹೇಳೋ ಅಂಥದ್ದೇನು ಮಾತಾಯಿತು? ಬರ್ತಲಿನೋ ಮೂರ್ಖನಂತೂ ಅಲ್ಲ. ರಸಾಯನಶಾಸ್ತ್ರದ ಮೇಲೆ ಅವರಿಗಿರುವ ಪ್ರಭುತ್ವ ಅಸಾಧಾರಣವಾದದ್ದು."

"ನಿಜ. ರಸಾಯನಶಾಸ್ತ್ರದ ಮೇಲೇನೋ ಇದೆ." ಅರ್ತೆನ್ಸಿಯಾ ಹೇಳಿದಳು.

"ನೋಡ್ತಾ ಇರು ನೀನು, ಬರ್ತೊಲಿನೊ ಅವಳಿಗೆ ತಕ್ಕನಾದ ಗಂಡ ಅಂತ ಸಿದ್ಧವಾಗುತ್ತೆ. ಕೆಮಿಸ್ಟ್ರಿ ಅಂದರೇನು ಸುಮ್ಮನೆ ಆಯಿತೇನು? ಸ್ವಲ್ಪ ಶ್ರಮವಹಿಸಿ ಅವರು ಸಂಶೋಧನಾ ಪ್ರಬಂಧವನ್ನು ಅಚ್ಚುಮಾಡಿಸಿದರು ಅಂದರೆ ಇಡೀ ದೇಶದಲ್ಲೇ ಅವರೊಬ್ಬ ಆದರ್ಶ ಶಿಕ್ಷಕರು ಅಂತ